# ಥರ್ಡ್ ಬೆಲ್ಲಿನ 'ತಮಸೋಮಾ ಜ್ಯೋತಿರ್ಗಮ'

**ಪ್ರೀತಿ ನಾಗರಾಜ**
ಕಲೆ: ಬಿ.ಜಿ. ಗುಜ್ಜಾರಪ್ಪ

"ಹಾ, ಎಲ್ ಕೂತಿದೀರ?"

"ಇಲ್ಲೇ ಸೆಕೆಂಡ್ ರೋ"

"ಫ್ರಂಟ್ ಇಂದ್ಲಾ? ಬ್ಯಾಕ್ ಇಂದ್ಲಾ?"

"ಫ್ರಂಟ್ ಇಂದ ಕಣ್ರೀ, ಬ್ಯಾಕ್ ಇಂದ ಸೆಕೆಂಡ್ ರೋನಲ್ಲಿ ಕೂರಕ್ಕೆ ಇದೇನ್ ಸಿನ್ಮಾನಾ??"

"ಹಹಹ! ಅದೂ ಸರೀನೇ ಬಿಡಿ"

"ಮಾತು ಸಾಕು, ಬನ್ನಿ ಬೇಗ."

"ಶುರುವಾಯ್ತಾ?"

"ಈಗ ಶುರುವಾಗುತ್ತೆ ಸೆಕೆಂಡ್ ಬೆಲ್ ಆಯ್ತು ಬೇಗ ಬನ್ನಿ ಸೀಟ್ ಹಿಡ್ಕೊಂಡಿದೀನಿ."

"ಬಂದೆ ಬಂದೆ"

ಟರ್ರ್ ಅಂತ ಮತ್ತೆ ಬೆಲ್ಲು ರಂಗಮಂದಿರದ ಬೆಳಕು ಕಡಿಮೆ ಆಗುತ್ತಿದೆ. ಫೋನ್ ಮತ್ತೆ ಹಾಡು ಹೇಳುತ್ತದೆ.

"ಎಲ್ಲಿ ಕಾಣ್ತನೆ ಇಲ್ಲ?"

"ಥರ್ಡ್ ಬೆಲ್ಲೂ ಆಯ್ತು ಕಣ್ರೀ, ಏ ಸ್ವಲ್ಪ ಮುಂದೆ ಬರ್ರೀ ಇಲ್ಲೇ ಇದೀನ್ ನೋಡಿ."

ಅವರೂ ಕೈ ಎತ್ತಿ, ಇವರೂ ಕೈ ಎತ್ತಿ ಇಬ್ಬರೂ ಒಟ್ಟಿಗೇ ಕೂತುಕೊಂಡರೆ ಅಲ್ಲಿಗೆ ಅವರ ಕಥೆ ಮುಗಿದು ರಂಗದ ಮೇಲೆ ಮಂದ ಬೆಳಕು ಅಷ್ಟಿಷ್ಟು ರಂಗ ಸಜ್ಜಿಕೆ ಕಾಣೋಕೆ ಶುರು ಆಗುತ್ತೆ. ನಟರು ಅಲ್ಲೆಲ್ಲೋ ದೀರ್ಘ ಉಸಿರೆಳೆದುಕೊಂಡು ತಮ್ಮ ಎಂಟ್ರಿಗಾಗಿ ನಿಂತಿದ್ದಾರೆ.

★★★